International Journal of Kannada Research
of
Kannada Research

International Journal of Kannada Research
www.kannadajournal.com

**ISSN: 2454–5813**
IJKR 2024; 10(1): 80-83
© 2024 IJKR
www.kannadajournal.com
Received: 08-11-2023
Accepted: 19-12-2023

**Dr. Narayan KH**
Lecturer, Department of Sanskrit, Seshadripuram Composite PU College, Bangalore, Karnataka, India

**Corresponding Author:**
Lecturer, Department of Sanskrit, Seshadripuram Composite PU College, Bangalore, Karnataka, India

# भूमेः महत्वम्

**Dr. Narayan KH**

**DOI:** https://doi.org/10.22271/24545813.2024.v10.i1b.938

ಸಮಸ್ತ ಪ್ರಕಾರದ ವೃಕ್ಷ, ವನಸ್ಪತಿಗಳಿಗೆ ಆಶ್ರಯ ನೀಡಿ ಸರ್ವಧಾರಣ ಶಕ್ತಿಯಿರುವುದರಿಂದಲೇ ಈ ಭೂಮಿಯನ್ನು "सर्वधृता" ಎಂದು ಕರೆಯಬಹುದು. ವಿಶೇಷವಾದ ಕಾರುಣ್ಯವುಳ್ಳ, ಕ್ಷಮಾಗುಣವುಳ್ಳ, ದೈವೀ ಶಕ್ತಿಯ ಸನ್ನಿಕರ್ಷವುಳ್ಳ, ಜಗತ್ ಪೋಷಣಕರವಾದ ನಾನಾ ವಿಧದ ಅನ್ನಾದಿ ಪದಾರ್ಥಗಳನ್ನು ಹೊಂದಿದ ಈ ಭೂಮಿಯಲ್ಲಿ ನಾವು ಆನಂದದಿಂದ ವಾಸ ಮಾಡುತ್ತೇವೆ. ಅನ್ನಾದಿ ಪದಾರ್ಥಗಳನ್ನು ಪಡೆಯಲು ಕೃಷಿ ಬೇಕೇ ಬೇಕು. ಇಂತಹ ಕೃಷಿಯನ್ನು ಮಾಡುವಾಗ ಭೂಮಿಯ ಆವಶ್ಯಕತೆ ಇದ್ದೇ ಇರುತ್ತದೆ. ಕೃಷಿಯನ್ನು ಮಾಡುವಾಗ ಭೂತಾಯಿಯನ್ನು ಊಳಲೇ ಬೆಕು. ಊಳದೇ ಕೃಷಿಯನ್ನು ಮಾಡುವುದು ಅಸಾಧ್ಯ. ಹಾಗಿರುವಾಗ ಉಳುಮೆ ಮಾಡುವ ಸಂದರ್ಭದಲ್ಲಿ ಭೂಮಾತೆಗೆ ತೊಂದರೆ ಉಂಟಾಗಬಾರದೆಂದು ಮಾನವ ಜೀವಿ ಭೂತಾಯಿಯನ್ನು ಪ್ರಾರ್ಥಿಸಲೇ ಬೇಕಾಗುತ್ತದೆ. ಅದಕ್ಕಾಗಿಯೇ ಅಥರ್ವ ವೇದದಲ್ಲಿ –

यत् ते॒ भूमे वि॒खना॑मि क्षि॒प्रं तदपि॑ रोहतु।
माते॒ मर्म॑ विमृ॒ग्वरी॒ माते॒ हृद॑यमर्पितम् ॥

ಹೇ! ಭೂಮಿಯೇ ಕೃಷಿಗಾಗಿ ನಾನು ಉಳುಮೆ ಮಾಡಿ ಹಸನುಗೊಳಿಸಿದ ಭೂಮಿಯಲ್ಲಿ ಚೆನ್ನಾದ ಬೆಳೆ ಬರಲಿ. ನಾನು ರೆಂಟೆ ಹೊಡೆಯುವಾಗ ಅಥವಾ ಭೂಮಿಯನ್ನು ಅಗೆಯುವಾಗ ಪವಿತ್ರವಾದ ಭೂತಾಯಿಯ ಮರ್ಮಸ್ಥಾನಕ್ಕೆ, ಹೃದಯ ಭಾಗಕ್ಕೆ ಪೆಟ್ಟು ಬಿದ್ದು ನನ್ನಿಂದ ಹಾನಿ ಸಂಭವಿಸದಿರಲಿ ಎಂದು ಪ್ರಾರ್ಥಿಸುವ ಮಂತ್ರ ಗೋಚರವಾಗುತ್ತದೆ.

ಹೀಗೆ ನಮ್ಮಿಂದ ಉತ್ತಲ್ಪಟ್ಟರೂ ಕೂಡ, ಘಾಸಿಯಾದರೂ ಕೂಡ, ಭೂತಾಯಿಯು ತನ್ನ ಗತಿ ಸ್ಥಿತಿಗನುಕೂಲವಾಗಿಯೇ ಚಲಿಸುವ ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ ಹಾಗೂ ವಸಂತಗಳ ಋತು ಚಕ್ರವು ಹಾಗೂ ದಿನ ರಾತ್ರಿಗಳು, ವರ್ಷಗಳು ಇತ್ಯಾದಿ ಅಂಗಗಳನ್ನು ಹೊಂದಿದ ಕಾಲಚಕ್ರದಿಂದ ನಮಗೆ ಸಂತೋಷವನ್ನುಂಟುಮಾಡುತ್ತಿದೆ. ಪರ್ಜನ್ಯ ಮೇಘದಿಂದ ರಕ್ಷಿತೆಯಾಗಿರುವ ಹಾಗೂ ಮಳೆಯಿಂದ ಆಮೋದಗೊಳ್ಳುವ ಈ ಭೂಮಿಯಲ್ಲಿ ಉಣ್ಣುತಕ್ಕಂತಹ ನಾನಾ ವಿಧದ ಖಾದ್ಯ ಪದಾರ್ಥಗಳು ಹಾಗೂ ಭತ್ತ, ಜವೆಗೋಧಿ ಇತ್ಯಾದಿ ಧಾನ್ಯಗಳನ್ನು ಬೆಳೆಯುತ್ತ ಪಂಚ ವಿಧದ

ಕರ್ಮವನ್ನು ಮಾಡುತ್ತ (ಕೃಷಿ, ಪಶುಪಾಲನೆ, ವ್ಯಾಪಾರ, ಕುಶಲಕರ್ಮ, ಯುದ್ಧ) ವಿವಿಧ ಜೀವಿಗಳು ಸುಖಮಯ ಜೀವನವನ್ನು ನಡೆಸುತ್ತವೆ.

यस्यामन्नं व्रीहियवौ यस्यां इमाः पंच कृष्टयः ।
भूम्यै पर्जन्यपत्न्यै नमोऽस्तु वर्षमेदसे ॥

ಯಾವ ಭೂಮಿಯಲ್ಲಿ ಅನ್ನ, ಭತ್ತ, ಜವೆ ಗೋಧಿ ಮೊದಲಾದ ಆಹಾರಧಾನ್ಯಗಳನ್ನು ಬೆಳೆಯುತ್ತಾರೋ, ಯಾವ ಈ ಭೂಮಿಯಲ್ಲಿ ಪಂಚ ವಿಧದ ಕೃಷಿಯನ್ನು ಮಾಡುತ್ತಾರೋ, ಮೇಘದ ಪತ್ನಿಯಂತೆ ಕಂಗೊಳಿಸುತ್ತ ಸದಾಕಾಲ ಮಳೆಯನ್ನು ಸುರಿಸುವಂತೆ ಮಾಡುವ ಭೂಮಿ ತಾಯಿಗೆ ನನ್ನ ನಮಸ್ಕಾರ. (ಪಂಚ ಕೃಷಿಗಳು ಕೃಷಿ, ಪಶುಪಾಲನೆ, :- ವ್ಯಾಪಾರ ಕುಶಲಕರ್ಮ, ಯುದ್ಧ).

ಹೀಗೆ ಅದಮ್ಯವಾದ ಸ್ವರೂಪವನ್ನು ವಿಸ್ತಾರಗೊಳಿಸಿದ ಪೃಥ್ವಿಯು ವಿಶಾಲವಾಗಿ ಹರಡಿಕೊಂಡಾಗ ಪೂರ್ವ ಕಾಲದಲ್ಲಿ ದಿವ್ಯ ಜನರು ಈ ಹರಡಿಕೊಂಡಂಥ ಭೂಮಿಗೆ "ಪ್ರಥಮಾನಾ" "ಪೃಥಿವಿ" ಎಂದು ಕರೆದರು. ಹೀಗೆ ಭೂಮಿಯು ವಿಶಾಲವಾಗಿ ಹರಡಿಕೊಂಡ ನಂತರವೇ ಇಲ್ಲಿ ಅತ್ಯಂತ ಸುಂದರತಮವಾದ ಜೀವಿಗಳು, ಪ್ರಾಣಿಗಳು, ಪಶು ಪಕ್ಷಿಗಳು ಹುಟ್ಟಿ ಆಶ್ರಯ ಪಡೆದವು. ಆಗಲೇ ನಾಲ್ಕೂ ದಿಕ್ಕುಗಳು ಉತ್ಕೃಷ್ಟತರವಾಗಿ ವ್ಯಾಪ್ತವಾದವು.

शंतिवा सुरभिः स्योना कीलालोध्नी पयस्वती ।
भूमिरधि ब्रवीतु मे पृथिवी पयसा सह ॥

ಶಾಂತಿವಂತೆಯಾದ, ಸುಗಂಧಭರಿತವಾಗಿದ್ದು ಮಂಗಳಕರಳಾದ ತನ್ನಲ್ಲಿ ಅಮೃತ ಸದೃಶವಾದ ಆಹಾರ ಪದಾರ್ಥಗಳನ್ನು ಹೊಂದಿ ಹಾಲಿನಂತಹ ಜಲವನ್ನು ನೀಡುವ ಭೂಮಾತೆಯು ನಮ್ಮನ್ನು ರಕ್ಷಿಸಿ ಅನುಗ್ರಹಿಸಲಿ.

ಈ ರೀತಿ ಪೃಥ್ವಿಯಿಂದಾಗಿ ನಾಲ್ಕೂ ದಿಶೆಗಳು ಉತ್ಕೃಷ್ಟತರವಾಗಿ ವ್ಯಾಪ್ತವಾಗಿರುವಂತೆ ಶಾಂತಿ ಕಾರಕವಾಗಿ ಕಲ್ಯಾಣಮಯವಾದ, ಸುಗಂಧಿತವಾದ, ಸಮೃದ್ಧವಾದ, ಜಲಸಂಭೃತವಾದ ಪೃಥಿವಿಯು ಜಗತ್ತಿನ ಸಕಲ ಚರಾಚರ ಜೀವಿಗಳ ಕಲ್ಯಾಣಕರಳಾಗಿದ್ದಾಳೆ. ಅವ್ಯಕ್ತವಾದ ಪ್ರಕೃತಿಯ ಒಡಲಲ್ಲಿ ಭೂಮಿಯನ್ನೂ ಸೃಜಿಸಿದ, ಅನಿರ್ವಚನೀಯನಾದ, ಅವಿಕಾರಕನಾದ ಭಗವಂತನು ಈ ಭೂಮಿಯಲ್ಲಿಯೇ ಅನ್ನಾದಿ ಪದಾರ್ಥಗಳನ್ನು ಸಂಯುಕ್ತಗೊಳಿಸಿ, ಭೋಗಿಸಲು ಯೋಗ್ಯವಾದ ನೆಲೆಯನ್ನು ಕಲ್ಪಿಸಿಕೊಟ್ಟು ಭೂತಾಯಿಯ ಮಕ್ಕಳಾದ ನಮಗೆ ನೆಲೆಯನ್ನು ಕಲ್ಪಿಸಿಕೊಟ್ಟಿದ್ದಾನೆ.

यामन्वैच्छद्धविषा विश्वकर्मान्तरर्णवे रजसि प्रविष्टाम् ।
भुजिष्यं पात्रं निहितं गुहा यदाविर्भोगे अभवन्मातृमद्भ्यः
॥

ವಿಶ್ವವನ್ನೇ ಸೃಷ್ಟಿಸಿದ ಪರಮಾತ್ಮನು, ಸಾಗರದ ಒಳಗೆ ಬೆಳ್ಳಿಯಂತೆ ಅಡಗಿ ಯಾವುದೋ ಹವಿಸ್ಸಿನಿಂದ ಅನ್ನಾದಿ ಆಹಾರಾದಿಗಳಿಂದ ಕೂಡಿಕೊಂಡು ಗುಹೆಯಲ್ಲಿದ್ದು ಭೋಗಿಸಲು ಯೋಗ್ಯವಾದ ವಸ್ತುಗಳನ್ನು ನೀಡುತ್ತಿರುವ ಈ ಭೂಮಾತೆಯನ್ನು ಸೃಷ್ಟಿಸಿ ನಮ್ಮ ಭೋಗ್ಯ ಜೀವನಕ್ಕೆ ಆಶ್ರಯವನ್ನು ಕಲ್ಪಿಸಿಕೊಟ್ಟನು. ಇಂತಹ ಭೂಮಿಯು ಜೀವ ಬೀಜಗಳು ಹುಟ್ಟುವ ಮಹಾ ಕ್ಷೇತ್ರವಾಗಿದೆ. (भूमिरावपनं महत्) ಎಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

उभेनभसी उभयांश्च लोकान् ये यज्वनामभिजिताः स्वर्गाः॥

ದ್ಯೌ ಮತ್ತು ಪೃಥ್ವಿ ಎಂದು ಕರೆಸಿಕೊಡಲ್ಪಡುವ ಭೂಮಿ ಮತ್ತು ಅಂತರಿಕ್ಷಗಳೆರಡೂ ಲೋಕಗಳು ಯಜ್ಞವನ್ನು ಮಾಡಿ ಗೆಲ್ಲಲ್ಪಟ್ಟ ಸ್ವರ್ಗ ಲೋಕಗಳೆನಿಸಿವೆ.

ಪೃಥಿವೀ ಲೋಕ ಹಾಗೂ ದ್ಯುಲೋಕಗಳೆರಡೂ ಇಹ ಹಾಗೂ ಪರ ಲೋಕಗಳು ಯಜ್ಞ ಮಾಡಿ ಸಂಪಾದಿಸಬೇಕಾದ ಸುಖಮಯ ಸ್ಥಿತಿಗಳಾಗಿವೆ. ಎಂದು ಈ ಮೇಲಿನ ಮಂತ್ರವು ಸಾರುತ್ತದೆ. ಯಾವ ರೀತಿ ತಾಯಿಯಾದವಳು ಮಗುವನ್ನು ಪ್ರೀತಿಯಿಂದ ಪೋಷಿಸಿ, ಪಾಲಿಸಿ ಬೆಳೆಸಿದರೂ ಅದೇ ಮಗು ದೊಡ್ಡದಾದ ನಂತರ ತಾಯಿಯನ್ನು ದ್ವೇಷಿಸಿದರೂ ತಾಯಿಯಾದವಳು ತನ್ನ ತಾಯ್ತನವನ್ನು ಹೇಗೆ ಕಳೆದುಕೊಳ್ಳುವುದಿಲ್ಲವೋ ಹಾಗೆ ಗಂಧತ್ವವನ್ನು ಹೊಂದಿ ಪೃಥ್ವಿ ತತ್ವವನ್ನು ಅಂತರ್ಗತ ಮಾಡಿಕೊಂಡಿರುವ ಪೃಥಿವಿಯು ಹೊರ ರೂಪದಲ್ಲಿ ಪರಿವರ್ತನೆ ಕಾಣುತ್ತಿದ್ದರೂ ಮೂಲತ: ಸಮಸ್ತ ಭೂಮಿಯು ಒಂದೇ ಗುಣವುಳ್ಳದ್ದಾಗಿದೆ. ನಾವೂ ಕೃಷಿಗಾಗಿ ಅಥವಾ ನಿಧಿಗಾಗಿ, ಖನಿಜಗಳಿಗಾಗಿ ಭೂಮಿಯನ್ನು ಅಗೆದು ಬಗೆಯುತ್ತೇವೆ. ಹಾಗಾದರೂ ಸಹ ತಾಯಿಯು ತಾಯ್ತನವನ್ನು ಕಳೆದು

ಕೊಳ್ಳುವಂತೆ ನಿರುಪಯುಕ್ತವಾಗದೇ ನಮಗೆ ಸದಾ ಪ್ರಯೋಜಕವಾಗಿರುತ್ತದೆ. ತಾಯಿಯು ತನ್ನ ಮಗುವನ್ನು ಪ್ರೀತಿಸುವಂತೆ ಪೃಥಿವಿಯು ಸಕಲ ಜೀವ ಜಾತಗಳನ್ನು ಪ್ರೀತಿಸುತ್ತದೆ. ಈ ಮಮತಾಮಯಿ, ಕರುಣಾಮಯಿ ಪೃಥಿವಿ ತತ್ವದಲ್ಲೇ ಪೃಥಿವಿಯ ಸಾಫಲ್ಯ ಅಡಗಿದೆ ಎಂಬುದು ಈ ಕೆಳಗಿನ ಮಂತ್ರಗಳ ಗಮನಾರ್ಹ ವಿಷಯ.

पृथिवीं त्वा पृथिव्यामा वेशयामि तनुः समानी विकृतात एषा ।
यद्यद् द्युत्तं लिखितमर्पणेन तेन मा सुस्रोर्ब्रह्मणापि तद् वपामि ॥

ಇಂತಹ ಭೂಮಿಯಲ್ಲಿ ಗಂಧತ್ವ ಎಂಬ ತತ್ವವು ಆವಿರ್ಭಾವವಾಗಿದೆ. ಕಾರಣವಶಾತ್ ಭೂಮಿಯು ವಿಕೃತವಾಗಿದ್ದರೂ (ಪರಿವರ್ತಿತವಾದರೂ) ಅದರ ರೂಪ ಒಂದೇ ಆಗಿದೆ. ಕೃಷಿ ಮಾಡುವುದಕ್ಕೋಸ್ಕರ ಯಾವ ಯಾವ ಭಾಗವನ್ನು ನಾವು ಅಗೆಯುತ್ತೇವೆಯೋ ಅಂತಹ ಭೂಭಾಗವು ಪ್ರಯೋಜನ ರಹಿತವಾಗದೇ ಅಲ್ಲಿಯೂ ಕೂಡ ನನ್ನ ಸ್ವಸಾಮರ್ಥ್ಯದಿಂದ ಬೀಜವನ್ನು ಬಿತ್ತಿ ಫಸಲನ್ನು ಪಡೆಯುತ್ತೇನೆ ಎಂಬ ಭಗವದ್ವಾಕ್ಯವನ್ನು ಪೂರ್ಣಗೊಳಿಸಲು,

पृथिवीप्रो मंह्विषो नाधमानस्य गातुरदब्धचक्षुः परि विश्वं बभूवं ।

ಎಂಬ ಮಂತ್ರಾನುಸಾರ, ಅಗ್ನಿ ದೇವನು ಬಲವಂತವಾದ ಪೃಥ್ವಿಯನ್ನು ಇನ್ನೂ ಬಲಯುತಗೊಳಿಸುತ್ತ, ಅವನನ್ನು ಉಪಾಸಿಸುವವರಿಗೆ ಜ್ಞಾನವೆಂಬ ಬೆಳಕನ್ನು ನೀಡಿ ಮಾರ್ಗದರ್ಶನ ಮಾಡುತ್ತ ತನ್ನ ಕಣ್ಣುಗಳನ್ನು ಮುಚ್ಚದೇ ಸದಾಕಾಲ ವಿಶ್ವದ ಪರ್ಯಟನೆ ಮಾಡುತ್ತಿರುತ್ತಾನೆ.

ಹೀಗೆ ನವದ್ರವ್ಯಗಳಲ್ಲಿ ಮೊದಲಾದ ಪೃಥಿವಿಯು ಗಂಧತ್ವವನ್ನು ಹೊಂದಿದೆ ಎಂಬುದಾಗಿ ನ್ಯಾಯ ಶಾಸ್ತ್ರವು 'ಗಂಧತ್ವವೇ ಪೃಥಿವೀ' ಎಂದು ಹೇಳಿದೆ. ಈ ಉಕ್ತಿಯನ್ನು ನಾನಿಲ್ಲಿ ವಿಶೇಷವಾಗಿ ಹೇಳಲು ಕಾರಣವೇನೆಂದರೆ ಈ ಪೃಥ್ವಿಯಲ್ಲಿ ಗಂಧತ್ವ ಎಂಬ ಶೇಷವಾದ ಶಕ್ತಿ ಇದೆ ಎಂಬುದನ್ನು ಮನವರಿಕೆ ಮಾಡಿಕೊಡುವುದಕ್ಕೋಸ್ಕರ. ಹಾಗಿದ್ದರೆ ಈ ಗಂಧತ್ವ ಹೇಗೆ ಬಂತೆಂದು ವಿಚಾರಿಸ ಹೊರಟರೆ ಜೀವಿಗೆ ಕಣ್ಣು, ಕೈಕಾಲು ಹಾಗೂ ಇನ್ನಿತರ ಅಂಗಾಂಗಳು ಹೇಗೆ ಬಂತೆಂಬುದನ್ನು ಕೇಳಿದಂತಾಗುತ್ತದೆ. ಜೀವಿಗೆ ಅಂಗಾಂಗಗಳು ಹೇಗೆ ಸ್ವಾಭಾವಿಕವಾದ ದೈವೀ ಸೃಷ್ಟಿಯೋ ಹಾಗೆಯೇ ಭೂಮಿಗೆ ಗಂಧತ್ವ ಎಂಬುದು ಸ್ವಭಾವದತ್ತವಾಗಿದೆ. ಉದಾಹರಣೆಯನ್ನು ನೋಡ ಹೊರಟರೆ ಒಂದು ಮಲ್ಲಿಗೆಯ ಬಳ್ಳಿಯನ್ನು ಮತ್ತು ಒಂದು ಮಾವಿನ ಮರವನ್ನು ತೆಗೆದುಕೊಳ್ಳೋಣ. ಮಲ್ಲಿಗೆಯ ಬಳ್ಳಿಗೆ ಸೇರಿದ ಮಣ್ಣೂ ಒಂದೇ ಅದರ ಹತ್ತಿರದಲ್ಲಿರುವ ಮಾವಿನ ಮರಕ್ಕೆ ಸೇರಿದ ಮಣ್ಣೂ ಒಂದೇ ಆಗಿದೆ. ಇಲ್ಲಿ ಮಲ್ಲಿಗೆ ಹೂವಿನ ಬಳ್ಳಿಯು ತನ್ನ ಶರೀರಕ್ಕೆ ಬೇಕಾದ ಗಂಧತ್ವವನ್ನು ಹೀರಿಕೊಂಡು ಮಾವು ತನಗೆ ಬೇಕಾದ ವಿಭಿನ್ನವಾದ ಇನ್ನೊಂದು ಗಂಧವನ್ನು ಎತ್ತಿಕೊಳ್ಳುತ್ತದೆ. ಹಾಗಿದ್ದರೆ ಈ ಭೂಮಿಯು ಸರ್ವಗಂಧಯುಕ್ತವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಅದೇನೆ ಇದ್ದರೂ ಅಥರ್ವಣ ವೇದದಲ್ಲಿನ ಪೃಥ್ವಿಗೆ ಸಂಬಂಧಪಟ್ಟ ಮಂತ್ರಗಳನ್ನು ಅವಲೋಕಿಸಿದಾಗ ನಮಗೆ ಅರಿವಾಗುವುದೆಂದರೆ ಈ ದಿನ ವೈಜ್ಞಾನಿಕವಾಗಿ ಅರಿಯಲ್ಪಡುತ್ತಿರುವ ಭೂಮಿಯ ಹಿನ್ನೆಲೆಗಳು ಅಥವಾ ಭೂಗೋಲದ ಹಿನ್ನೆಲೆಗಳು, ಈ ಭೂಮಿಯ ರೂಪು ರೇಷೆಗಳು ಇವೆಲ್ಲವೂ ವೇದದಲ್ಲಿಯೂ ತಿಳಿಸಲ್ಪಟ್ಟಿರುವುದನ್ನು ನಾವು ಕಾಣುತ್ತೇವೆ. ಸಮತಟ್ಟಾದ ಪ್ರದೇಶದ ವಿವರಣೆಯಾಗಲಿ, ಪರ್ವತ ಪ್ರದೇಶಗಳ ವಿವರಣೆಯಾಗಲಿ ಅಥವಾ ಇಳಿಜಾರು ಪ್ರದೇಶಗಳ ವಿವರಣೆಯಾಗಲಿ ಎಲ್ಲವೂ ವೇದದಲ್ಲಿಯೇ ಇದ್ದುದನ್ನು ನಾವು ಕಾಣುತ್ತೇವೆ. ಹಾಗೂ ಸಸ್ಯ ಸಂಪತ್ತುಗಳಿಗೆ ಹಾಗೂ ಖನಿಜ ಪದಾರ್ಥಗಳಿಗೆ ಯಾವ ಭೂಮಿಯು ಉಪಯುಕ್ತ ಮತ್ತು ಯಾವ ಭೂಪ್ರದೇಶದಲ್ಲಿ ನೀರಿನ ಸೌಲಭ್ಯಗಳು ದೊರೆಯುತ್ತದೆ. ಈ ಮೊದಲಾದ ವಿಚಾರಗಳು ಆಥರ್ವಣ ವೇದದಲ್ಲಿಯೂ ಇರುವುದರಿಂದ ಕೃಷಿಗೆ ಬೇಕಾದ ಭೂಪ್ರದೇಶದ ಕುರಿತು ವೇದವನ್ನು ಅರಿತೇ ಕೃಷಿ ಕರ್ಮಗಳನ್ನು ಕೈಗೆತ್ತಿಕೊಳ್ಳುವುದು ಒಳ್ಳೆಯದಲ್ಲವೇ?

## ಉಲ್ಲೇಖ

1. ಅಥರ್ವವೇದ ಸಂಹಿತಾ - ಪಂ.ಶ್ರೀಪಾದ ದಾಮೋದರ್ ಸಾತವಲೇಕರ್
2. ಅಥರ್ವ ವೇದ ಸಂಹಿತಾ ಸಾಯಣಭಾಷ್ಯ ಸಹಿತ - ಸ್ವಾಮಿ ಆದಿದೇವಾನಂದ
3. ಅಥರ್ವವೇದ ಭಾಷ್ಯ - ಪಂ.ಶೇಷ ನವರತ್ನ
4. ವೈದಿಕ ಸಾಹಿತ್ಯ ಚರಿತ್ರೆ - ವಿದ್ವಾನ್. ಎನ್. ಎಸ್. ಅನಂತರಂಗಾಚಾರ್

5. ಸಂಸ್ಕೃತ ಕನ್ನಡ ಶಬ್ದ ಕೋಶ - ಎಸ್. ವಿ. ಹಂಜಿ
6. ಮನುಸ್ಮೃತಿ - ಅನು : ಶೇಷ ನವರತ್ನ
7. ಅಮರಕೋಶ- ಜಿ. ಕೃಷ್ಣಮೂರ್ತಿ ಭಟ್ಟ
8. ನ್ಯಾಯ ಸಿದ್ಧಾಂತ ಮುಕ್ತಾವಲೀ - ಶ್ರೀ.ಕೃಷ್ಣ ವಲ್ಲಭಾಚಾರ್ಯ
9. ಋಗ್ವೇದದಲ್ಲಿರುವ ಮಹತ್ವದ ವಿಚಾರಗಳು - ಜಯಂತಿ ಮನೋಹರ್
10. ಮಂತ್ರ ಸಂಗ್ರಹ - ವಿದ್ವಾನ್.ಎಚ್. ಎನ್. ಸುರೇಶ್